ಸಿ.ಸಿ. ನಂ. 184-2012 PW-2

ದಿನಾಂಕಃ 04-09-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ . ವಕೀಲರಿಂದಃ

1. ನಾನು ಸುಮಾರು 15 ವರ್ಷಗಳಿಂದ ನಿರಂತರವಾಗಿ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸುಮಾರು 20-25 ಆನಮೋಡ ತನಿಖಾ ಠಾಣೆಗೆ ಪ್ರಕರಣಗಳಲ್ಲಿ ನಾನು ಸಾಕ್ಷ್ಯವನ್ನು ನುಡಿದಿರುತ್ತೇನೆ ಎಂದರೆ ಸರಿ. ಚಾಸಾ 3 ರವರ ಪರಿಚಯ ಇದೆ. ಅವರು ಸಹ ಸುಮಾರು 15 ವರ್ಷಗಳಿಂದ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ.

2. ಕೊನೆಯದಾಗಿ ಈ ನ್ಯಾಯಾಲಯದಲ್ಲಿ ಯಾವ ಪ್ರಕರಣದಲ್ಲಿ ಯಾವ ದಿನಾಂಕದಂದು ಸಾಕ್ಷ್ಯ ನುಡಿದಿರುತ್ತೇನೆ ಎಂದು ನನಗೆ ನೆನಪಿಲ್ಲಾ. ನಾವು ಬೆಳಿಗ್ಗೆ 10-00 ರಿಂದ ರಾತ್ರಿ 7-00 ಗಂಟೆಗೆಯವರೆಗೆ ಹಾಗೂ ರಾತ್ರಿ 7 ರಿಂದ ಬೆಳಿಗ್ಗೆ 10 ಗಂಟೆಯವರೆಗೆ 12 ಗಂಟೆಯ ಅವದಿಯ ಕೆಲಸ ಇರುತ್ತದೆ. ನಾನು ಹಾಗೂ ಚಾಸಾ 3 ರವರು ಒಂದೇ ಕರ್ತವ್ಯದ ಪಾಳಿಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ಪ್ರಸ್ತುತ ಪ್ರಕರಣದ ದಾಖಲಾಗುವ ನಾನು ಹಾಗೂ ಚಾಸಾ 3 ರವರು ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವು.

3. ಪ್ರಕರಣದ ಮಾಹಿತಿಯನ್ನು ಚಾಸಾ 1 ರವರು ಸಂಜೆ 7-00 ಗಂಟೆಯ ಸಮಯಕ್ಕೆ ತಿಳಿಸಿರುತ್ತಾರೆ. ಆಗ ನಾನು ಕರ್ತವ್ಯದಲ್ಲಿದ್ದೇನು. ತನಿಖಾ ಠಾಣೆಯಲ್ಲಿ ನನ್ನನ್ನು ಹಾಗೂ ಚಾಸಾ 1 ರವರನ್ನು ಹೊರತು ಪಡಿಸಿ ಇನ್ನು 4 ಜನ ಸಿಬ್ಬಂದಿಯವರು ಕೆಲಸ ಮಾಡುತ್ತಿದ್ದರು. ಪ್ರಕರಣದ ವಾಹನವನ್ನು ತಪಾಸಣೆ ಮಾಡುವ ಮುಂಚಿತವಾಗಿ ಯಾವ ವಾಹನವನ್ನು ತಪಾಸಣೆ ಮಾಡಿದ್ದೇವು ಎಂದು ನನಗೆ ನೆನಪಿಲ್ಲಾ. ಪ್ರಕರಣದ ವಾಹನವನ್ನು ತಪಾಸಣೆ ಮಾಡುವ ಮುಂಚಿತವಾಗಿ ಸುಮಾರು 50 ವಾಹನಗಳನ್ನು ತಪಾಸಣೆ ಮಾಡಿದ್ದೇವು. ಅಬಕಾರಿ ತನಿಖಾ ಠಾಣೆಯ ಪಕ್ಕದಲ್ಲಿ ಅರಣ್ಯ ಇಲಾಖೆಯ , ಖನಿಜಾ ಇಲಾಖೆಯ ಮತ್ತು ವಾಣಿಜ್ಯ ಕಂದಾಯ ಇಲಾಖೆಯ ಚೆಕ್ಕ ಪೋಸ್ಟ ಬಳಿ ಇದ್ದೇವು. ಚೆಕ್ಕಪೋಸ್ಟದಿಂದ ಸುಮಾರು 50 ಮೀಟರ ದೂರದ ತನಕ ನೇರವಾಗಿ

ವಾಹನಗಳನ್ನು ನೋಡಬಹುದು. ಸದ್ರಿ ವಾಹನವು ಚೆಕ್ಕಪೋಸ್ಟಗೆ ನೇರವಾಗಿ ಬಂದಿರುತ್ತದೆ. ವಾಹನವನ್ನು ಕೈಸನ್ನೆ ಮಾಡಿ ಚಾಸಾ 1 ರವರು ಬದಿಗೆ ನಿಲ್ಲಿಸಿರುತ್ತಾರೆ. ವಾಹನ ಬರುವುದನ್ನು ಸುಮಾರು 50 ಮೀಟರ ದೂರದಿಂದಲೇ ನೋಡಿರುತ್ತೇವೆ. ವಾಹನವನ್ನು ಚೆಕ್ಕ ಪೋಸ್ಟ ಬಳಿಯ ರಸ್ತೆಯ ಬದಿಗೆ ಸುಮಾರು 5 ಮೀಟರ ದೂರದಲ್ಲಿ ನಿಲ್ಲಿಸಿರುತ್ತೇವೆ. ವಾಹನದ ನಂಬರ ಪ್ಲೇಟನ ಮೇಲೆ 3 ಅಡಿ ಉದ್ದವಾಗಿ ಅಶೋಕ ಲೈಲೆಂಡ್ ಎಂದು ಬರೆದಿತ್ತು. ಅದನ್ನು ಹೊರತು ಪಡಿಸಿ ಬೇರೆ ಯಾವುದೇ ಬರಣಿಗೆ ಇತ್ತೊ ಇಲ್ಲವೋ ನನಗೆ ನೆನಪಿಲ್ಲಾ .

5. ಚಾಸಾ 1 ರವರು ವಾಹನವನ್ನು ತಪಾಸಣೆ ಮಾಡಲು ನನಗೆ ತಿಳಿಸಿರುತ್ತಾರೆ. ಚಾಸಾ 3 ರವರು ಬೇರೆ ವಾಹನವನ್ನು ತಪಾಸಣೆ ಮಾಡುತ್ತಿದ್ದರು. ಮೊದಲಿಗೆ ವಾಹನದ ಕ್ಯಾಬೀನ್, ಮೇಲೆ ಭಾಗ ಪರಿಶೀಲಿಸಿ ನಂತರ ಹಿಂಭಾಗವನ್ನು ಪರಿಶೀಲಿಸಿರುತ್ತೇವೆ. ಕ್ಯಾಬೀನ ಯಾವೆಲ್ಲಾ ವಸ್ತುಗಳು ಇದ್ದವು ಎಂದು ನನಗೆ ನೆನಪಿಲ್ಲಾ. ಕ್ಯಾಬೀನ ಮೇಲೆ ಯಾವುದೇ ವಸ್ತುಗಳು ಇರಲಿಲ್ಲ. ಕ್ಯಾಬೀನಲ್ಲಿ 2 ಸೀಟುಗಳು ಇದ್ದವು. ವಾಹನದ ಹಿಂಬದಿ ಸುಮಾರು 8 ಅಡಿ ಅಗಲ, 30 ಅಡಿ ಉದ್ದ ಇತ್ತು. ಕ್ಯಾಬೀನಗೆ ತಾಗಿಕೊಂಡು ಮುದ್ದೆ ಮಾಲುಗಳು ಇದ್ದವು. ಸುಮಾರು 5 ಗೋಣಿ ಚೀಲಗಳು ಇದ್ದವು. ಸದ್ರಿ ಗೋಣಿ ಚೀಲ ಸುಮಾರು 3X 1.5 ಅಡಿ ಇತ್ತು. ಗೋಣಿ ಚೀಲದ ಮೇಲೆ ಯಾವ ಬರವಣಿಗೆಗಳು ಇದ್ದವು ಎಂದು ನೆನಪಿಲ್ಲಾ. ಮುದ್ದೆ ಮಾಲಗಳನ್ನು ಬಾಕ್ಸಗಳಲ್ಲಿ ಹಾಕಿ ಗೋಣಿ ಚೀಲದಲ್ಲಿ ಹಾಕಿ ಪ್ಲಾಸ್ಟೀಕ ಹಗ್ಗದಿಂದ ಕಟ್ಟಿ ಇಡಲಾಗಿತ್ತು. ಒಂದೊಂದು ಚೀಲದಲ್ಲಿ ಸುಮಾರು 4–5 ಬಾಕ್ಸಗಳು ಇದ್ದವು. ಸದ್ರಿ ಬಾಕ್ಸ ಗಳು 1 ಅಡಿ ಉದ್ದ ಒಂದೂವರೆ ಅಡಿ ಅಗಲ ಇದ್ದವು. ಪ್ಲಾಸ್ಟೀಕ ಹಗ್ಗವೂ ಸುಮಾರು 1 ಅಡಿ ಉದ್ದ ಇತ್ತು.

6. ಯಾವ ಗೋಣಿ ಚೀಲದಲ್ಲಿ ಯಾವ ಬಾಕ್ಸಗಳು ಇದ್ದವು ಎಂದು ನೆನಪಿಲ್ಲಾ. ಚೀಲವನ್ನು ಒಂದರ ಪಕ್ಕದಲ್ಲಿ ಒಂದನ್ನು ಇಟ್ಟಿದ್ದರು. 5 ಚೀಲಗಳಲ್ಲಿ ಇದ್ದ ಬಾಕ್ಸಗಳು ಬೇರೆ ಬೇರೆ ಬ್ರಾಂಡ್ ಗೆ ಸೇರಿರುತ್ತವೆ. ಎಲ್ಲಾ ಬಾಕ್ಸಗಳು ಸೀಲಯಾಗಿದ್ದವು. ಯಾವ ಚೀಲದಲ್ಲಿ ಎಷ್ಟು ಬಾಕ್ಸಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಬಾಕ್ಸಗಳ ಮೇಲೆ ಬ್ರಾಂಡ್‌ಗಳ ಹೆಸರನ್ನು ಬರೆದಿರುತ್ತದೆ. ಚೀಲಗಳನ್ನು ಎಲ್ಲಾರು ಸೇರಿ ಇಳಿಸಿರುತ್ತೇವೆ.

ಬಾಕ್ಸಗಳನ್ನು ಚಾಸಾ 1 ರವರು ತೆಗೆದಿರುತ್ತಾರೆ. ಹಿಂಬದಿಯಲ್ಲಿ ಬಾಕ್ಸಗಳನ್ನು ಹೊರತುಪಡಿಸಿ ಬೇರೆ ಏನು ಇರಲಿಲ್ಲ. ಬಾಕ್ಸಗಳಲ್ಲಿ ರಾಯಲ್ ಟ್ಯಾಗ್ ವಿಸ್ಕಿ ಯ 96 ಬಾಟಲಿಗಳು ಹಾಗೂ ಬ್ರೆಂಡರ್ ಸ್ಪ್ರೈಡ್ ವಿಸ್ಕಿಗಳ 60 ಬಾಟಲಿಗಳು ಇದ್ದವು. ಆಂಟಿ ಕ್ಯೂಟಿ ವಿಸ್ಕಿ 60 ಬಾಟಲಿಗಳು (5 ಬಾಕ್ಸ ) ಇಂಪಿರಿಯಲ್ ಬ್ಲ್ಯೂ 24 ಬಾಟಲಿಗಳು (2 ಬಾಕ್ಸ ) , ಹಗ್ ಗೋಲ್ಡ ವಿಸ್ಕಿ 12 ಬಾಟಲಿಗಳು ಇದ್ದವು. ಒಂದು ಬಾಕ್ಸನಲ್ಲಿ 12 ಬಾಟಲಿಗಳು ಇರುತ್ತವೆ. ಬಾಟಲಿಗಳನ್ನು ತೆಗೆದು ಮಧ್ಯದ ಅಂಶ ಇರುವುದನ್ನು ತಪಾಸಣೆ ಮಾಡಿರುತ್ತೇವೆ. ಮಧ್ಯದ ಬಾಟಲಿಗಳನ್ನು ಚಾಸಾ 1 ರವರು ತೆಗೆದಿರುತ್ತಾರೆ. ಪ್ರತಿ ಬಾಕ್ಸಗಳಿಂದ ಒಂದೇರಡು ಬಾಟಲಿಗಳನ್ನು ತಗೇದು ತಪಾಸಣೆ ಮಾಡಿರುತ್ತಾರೆ. ಯಾವ ಬಾಕ್ಸಗಳಿಂದ ಎಷ್ಟು ಬಾಟಲಿಗಳನ್ನು ತೆಗೆದು ಪರಿಶೀಲನೆ ಮಾಡಿರುತ್ತಾರೆಂದು ಗೊತ್ತಿಲ್ಲ. ಬಾಕ್ಸಗಳ ಮೇಲೆ ಬರೆದ ಬ್ರಾಂಡಗಳ ವಿಸ್ಕಿಗಳ ಬಾಟಲಿಗಳು ಒಳಗೆ ಇದ್ದವು. ಬಾಕ್ಸಗಳ ಮೇಲೆ ತಯಾರಿಸಿದ ದಿನಾಂ, ಬ್ಯಾಚ್ ಸಂಖ್ಯೆ ನಮೂದಿಸಿರುವುದಿಲ್ಲ. ಬಾಟಲಿಗಳ ಮೇಲೆ ಇದ್ದ ಬ್ಯಾಚ್ ಹಾಗೂ ತಯಾರಿಸಿದ ದಿನಾಂಕವನ್ನು ಹೇಳಲು ಆಗುವುದಿಲ್ಲ.

7. ತಪಾಸಣೆ ಕಾಲಕ್ಕೆ ಬೇರೆ ಸಿಬ್ಬಂದಿಯವರು ಬೇರೆ ವಾಹನಗಳನ್ನು ತಪಾಸಣೆ ಮಾಡಿರುತ್ತಾರೆ. ತಪಾಸಣೆಯ ಕಾಲಕ್ಕೆ ಪೋಟೋ ಗಳನ್ನು ತೆಗೆದಿರುತ್ತಾರೆ. ಸದ್ರಿ ಪೋಟೋಗಳಲ್ಲಿ ನಾವು ಇರುವುದು ಕಂಡು ಬರುತ್ತದೆ. ಗೋವಾದಿಂದ ಗುಜರಾತಗೆ ಹೋಗಲು ಅನಮೋಡ ಮೂಲಕ ಅವಶ್ಯಕತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾಹನವನ್ನು ತಪಾಸಣೆ ಮಾಡಿದಾಗ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಪಂಚನಾಮೆಯಲ್ಲಿ ಸ್ವತಂತ್ರ ಪಂಚ ಸಾಕ್ಷಿದಾರರ ಇರದಿರುವ ಬಗ್ಗೆ ನಮೂದಿಸಿರುವುದು ನನಗೆ ಗೊತ್ತಿಲ್ಲ ಪಂಚನಾಮೆಯಲ್ಲಿ ವಾಹನವನ್ನು ಬದಿಗೆ ನಿಲ್ಲಿಸಿದ ಬಗ್ಗೆ ನಮೂದಿಸಿರುವುದು ನನಗೆ ಗೊತ್ತಿಲ್ಲ. ಬೇರೆ ಸಿಬ್ಬಂದಿಗಳು ಬೇರೆ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅನಮೋಡ ಚೆಕ್ಕ ಪೋಸ್ಟನಲ್ಲಿ ಸಾಕಷ್ಟು ಜನರ ಓಡಾಟ ಹಾಗೂ ಅಂಗಡಿಗಳು ಇರುತ್ತದೆ ಎಂದರೆ ಸರಿ. ಚೆಕ್ಕಪೋಸ್ಟ ನಲ್ಲಿಯ 24 ಗಂಟೆ ಸಿಬ್ಬಂದಿಗಳು ಇರುತ್ತಾರೆಂದರೆ ಸರಿ.

8. ಚಾಸಾ 1 ರವರು ಹೂಡಿದ ಸುಳ್ಳು ಪ್ರಕರಣಕ್ಕೆ ಸಂಬಂಧಿಸಿದಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಹೇಳಿದ ಸಮಯಕ್ಕೆ ಯಾವುದೇ ವಾಹನ ಬಂದಿಲ್ಲ, ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮುದ್ದೆಮಾಲಗಳನ್ನು ಜಪ್ತ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ